



# ಥಾಯ್ಲೆಂಡಿನ 'ಮಾವ್ಹೋ'ತ್ಸವ

■ ಚಿತ್ರ- ಲೇಖನ: ಆನಂದತೀರ್ಥ ಪ್ಯಾಟಿ

ರೈತರು ಅನುಸರಿಸುವ 'ಜಾಸ್ಮಿನ್' ಭತ್ತದ ಕೃಷಿ ವಿಧಾನ ನೋಡಿ ಬ್ಯಾಂಕಾಕ್‌ಗೆ ಮರಳುತ್ತಿದ್ದ ಸಂದರ್ಭದಲ್ಲಿ ನಮ್ಮ ಬಸ್‌ನ ಚಾಲಕಿಗೆ ಎಡಕ್ಕೆ ತಿರುಗುವಂತೆ ಗೈಡ್ ಮೈಕೆಲ್ ಕಾಮನ್ಸ್ ಸೂಚಿಸಿದರು. ಕುತೂಹಲದಿಂದ ಅತ್ತ ನೋಡಿದಾಗ, ಬೃಹತ್ ವಸ್ತು ಪ್ರದರ್ಶನದಂಥ ಪೆಂಡಾಲ್ ಕಾಣಿಸಿತು. ಅಷ್ಟು ಬಿಟ್ಟರೆ ಒಂದಷ್ಟು ಅರ್ಥವಾಗದ ಥಾಯ್ ಅಕ್ಷರಗಳೇ.

'ಬನ್ನಿ ಒಳ ಹೋಗಿ ನೋಡೋಣ...' ಎಂದು ಮೈಕೆಲ್ ಹೇಳಿದಾಗಲಷ್ಟೇ ಮಳಿಗೆಗಳ ಮುಂದೆ ಫುಟ್‌ಬಾಲ್ ಗಾತ್ರದ ಮಾವಿನ ಪ್ರತಿಕೃತಿ ಏಕೆ ಇಟ್ಟಿದ್ದಾರೆ ಎಂಬುದು ಗಮನಕ್ಕೆ ಬಂದಿದ್ದು! ಇದೊಂದು ರೀತಿ ಮಾವು ಉತ್ಸವ. ಈ ಸಮಯದಲ್ಲಿ ಮಾರುಕಟ್ಟೆಗೆ ಬರುವ ಮಾವಿನ ಹಣ್ಣುಗಳ ಮಾರಾಟಕ್ಕೆ ಈ ಪ್ರತ್ಯೇಕ ವ್ಯವಸ್ಥೆ. ಮಧ್ಯ ಥಾಯ್ಲೆಂಡ್‌ನಿಂದ ಪೂರ್ವಕ್ಕಿರುವ ಚಾಚೊಂಗ್ಸಾವ್ (ಪಾಯೆಟ್ ರಿಯೊ ಎಂದೂ ಕರೆಯುತ್ತಾರೆ) ಪ್ರಾಂತ್ಯ ಫಲವತ್ತಾದ ಮಣ್ಣು ಹೊಂದಿದೆ. ಇಲ್ಲಿ ಹರಿಯುವ ಬಾಂಗ್ ಪಕಾಂಗ್ ನದಿ ತಟದಲ್ಲಿ ಸಾವಿರಾರು ಎಕರೆ ಪ್ರದೇಶದಲ್ಲಿ ಮಾವಿನ ತೋಟಗಳಿವೆ. ದೊಡ್ಡ ಜಮೀನುದಾರರಷ್ಟೇ ಅಲ್ಲ, ಸಣ್ಣ ರೈತರ ಜಮೀನಿನಲ್ಲೂ ಮಾವಿನ ಮರಗಳಿವೆ. ಈ ಪ್ರದೇಶದಲ್ಲಿ ಬೆಳೆಯುವಷ್ಟು ಚೆನ್ನಾಗಿ ಬೇರೆ ಕಡೆ ಮಾವು ಬರುವುದಿಲ್ಲವಂತೆ. ಚಾಚೊಂಗ್ಸಾವ್ ಪ್ರಾಂತ್ಯದಲ್ಲಿ ಒಂದು ಅಂದಾಜಿನ ಪ್ರಕಾರ 40 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಮಾವಿನ ಮರಗಳಿವೆ. ಹತ್ತಾರು ತಳಿಗಳು ಇವೆಯಾದರೂ ರಾಯೆತ್, ಖಿಯಾವ್ ಸಾವ್ಹೊಯ್, ಚಾವ್ಹೊ ಖುನ್ ಥಿಪ್ ಹಾಗೂ ಥೊಂಗ್‌ದಾಮ್ ಎಂಬ ತಳಿಗಳು ಜನಪ್ರಿಯ.

ಮಾವಿನ ಹಣ್ಣುಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ನೆರವು ನೀಡುತ್ತದೆ. ರಾಜಧಾನಿ ಬ್ಯಾಂಕಾಕ್ ತಲುಪುವ ರಸ್ತೆಯ ಬದಿ 'ಬಾಂಗ್ ಕ್ಲಾ' ಎಂಬ ಸ್ಥಳದಲ್ಲಿ ವಿಶಾಲವಾದ ಸ್ಥಳ ಒದಗಿಸಿದೆ. ಇಲ್ಲಿ ಖುದ್ದಾಗಿ ರೈತರು ಹಾಗೂ ರೈತರಿಂದ ಮಾವು ಖರೀದಿಸುವ ವ್ಯಾಪಾರಿಗಳು ಮಳಿಗೆಗಳಲ್ಲಿ ಮಾರಾಟ ಮಾಡಬಹುದು.

ಅಂದ ಹಾಗೆ, ಬರೀ ಹಣ್ಣು ಮಾರಾಟಕ್ಕಷ್ಟೇ ಇದು ಸೀಮಿತವಲ್ಲ. ಮಾವಿನಿಂದ ತಯಾರಿಸಿದ್ದ ಮೂವತ್ತಕ್ಕೂ ಹೆಚ್ಚು ಬಗೆಯ ತಿಂಡಿ– ತಿನಿಸು ಮಳಿಗೆಗಳಲ್ಲಿ ಇದ್ದವು! ಹಣ್ಣುಗಳ ಮಾರಾಟಕ್ಕಿಂತ ಮಾವಿನ ಮೌಲ್ಯವರ್ಧನೆಗೆ ಹೆಚ್ಚು ಆದ್ಯತೆ ಕೊಟ್ಟಿದ್ದು ಎದ್ದು ಕಾಣುತ್ತಿತ್ತು. ಜಾಮ್, ಬಿಸ್ಕಿಟ್, ಹಪ್ಪಳ, ಚಿಪ್ಸ್, ನ್ಯೂಡಲ್ಸ್, ಕೇಕ್... ಮತ್ತಿತರ ಹೆಸರು ಗೊತ್ತಿಲ್ಲದ ಕುರುಕಲು ತಿಂಡಿಗಳ ಮಾರಾಟ ಭರದಿಂದ ಸಾಗಿತ್ತು. ಮಾಂಸಾಹಾರ ಪ್ರಿಯರಿಗೂ ಇಷ್ಟವಾಗುವಂತೆ ಕೀಟ– ಪ್ರಾಣಿಗಳ ಮಾಂಸವನ್ನು ಮಾವಿನ ರಸದಲ್ಲಿ ಫ್ರೈ ಮಾಡಿ ಇಡಲಾಗಿತ್ತು! ಬಣ್ಣದ ಆಕಾಶಬುಟ್ಟಿ, ಝಗಮಗಿಸುವ ವಿದ್ಯುದ್ದೀಪದಿಂದ ಅಲಂಕೃತಗೊಂಡಿದ್ದ ಒಂದೊಂದು ಮಳಿಗೆಯಲ್ಲೂ ಕಣ್ಸೆಳೆಯುವ ತಿನಿಸುಗಳು!

'ನನ್ನ ತೋಟ ಇಲ್ಲಿಂದ ನೂರಿಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಬ್ಯಾಂಕಾಕ್‌ಗೆ ಒಯ್ದು ಮಾರುವುದಕ್ಕಿಂತ ಇಲ್ಲೇ ನನಗೆ ಹೆಚ್ಚು ಲಾಭ. ಬೆಳಿಗ್ಗೆ ನನ್ನ ಪತ್ನಿ ಹಾಗೂ ಮಗಳು ಇಲ್ಲಿ ಇರುತ್ತಾರೆ. ಸಂಜೆ ನಾನು ಮಾರಾಟ ಮಾಡುತ್ತೇನೆ. ಮಾರ್ಚ್ ಹಾಗೂ ಏಪ್ರಿಲ್ ತಿಂಗಳು ನಮಗೆ ಇದೇ ಕೆಲಸ' ಎಂದಿದ್ದು ಕೃಷಿಕ ಆಂಗ್ ಸಾ.

ರಸ್ತೆ ಬದಿಯೇ ಈ 'ಮೇಳ' ನಡೆಯುವುದರಿಂದ ಬ್ಯಾಂಕಾಕ್‌ಗೆ ಹೋಗುವ ಪ್ರವಾಸಿಗರು ಮಳಿಗೆಗೆ ಲಗ್ಗೆ ಇಡುತ್ತಾರೆ. ಒಂದಲ್ಲ, ಎರಡಲ್ಲ... ಹತ್ತಾರು ತಳಿಯ ಮಾವಿನ ಹಣ್ಣು, ಮಾವಿನಿಂದ ತಯಾರಿಸಿದ ತಿನಿಸುಗಳು... ಬೆಲೆ ತುಸು ಹೆಚ್ಚು ಎನಿಸಿದರೂ ಯಾರೂ ಗೊಣಗಿದ್ದು ಕೇಳಿಸಲಿಲ್ಲ. ಮಾವಿನ ಹಣ್ಣುಗಳಿದ್ದ ದೊಡ್ಡ ದೊಡ್ಡ ಪ್ಲಾಸ್ಟಿಕ್ ಡಬ್ಬಿಗಳನ್ನು ಅತ್ತ ವಾಹನದಿಂದ ಇಳಿಸುತ್ತಿದ್ದಂತೆ ಇತ್ತ ಸಣ್ಣ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಖರೀದಿಸಿ ಕೊಂಡೊಯ್ಯುವ ಗ್ರಾಹಕರ ಭರಾಟೆಯೂ ಜೋರಾಗಿತ್ತು. ■